# ಕರ್ನಾಟಕ ವಿಧಾನಸಭೆ
## ಹದಿನೈದನೇ ವಿಧಾನಸಭೆ
## ಹದಿನೈದನೇ ಅಧಿವೇಶನ

## ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023
**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)**

ಕಾರ್ಖಾನೆಗಳ ಅಧಿನಿಯಮ, 1948ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕಾರ್ಖಾನೆಗಳ ಅಧಿನಿಯಮ, 1948ನ್ನು (1948ರ ಕೇಂದ್ರ ಅಧಿನಿಯಮ, LXIII)ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 54ನೇ ಪ್ರಕರಣದ ತಿದ್ದುಪಡಿ.-** ಕಾರ್ಖಾನೆಗಳ ಅಧಿನಿಯಮ, 1948(1948ರ ಕೇಂದ್ರ ಅಧಿನಿಯಮ LXIII)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 54ನೇ ಪ್ರಕರಣದಲ್ಲಿ,-

(i) ಅಸ್ತಿತ್ವದಲ್ಲಿರುವ ಉಪಬಂಧವನ್ನು ಉಪಪ್ರಕರಣ (1) ಎಂಬುದಾಗಿ ಮರು ಸಂಖ್ಯೆಯನ್ನು ನೀಡತಕ್ಕದ್ದು; ಮತ್ತು

(ii) ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ರಾಜ್ಯಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ಯುಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಕಾರ್ಖಾನೆಗಳ ಯಾವುದೇ ಗುಂಪು ಅಥವಾ ವಿಭಾಗ ಅಥವಾ ವರ್ಗದ ಸಂದರ್ಭದಲ್ಲಿ, 51ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ವಾರದಲ್ಲಿ ಗರಿಷ್ಠ ನಲವತ್ತೆಂಟು ಗಂಟೆಗಳಿಗೊಳಪಟ್ಟು, ಯಾವುದೇ ದಿನದಲ್ಲಿನ ವಿರಾಮದ ಮಧ್ಯಂತರವನ್ನು ಒಳಗೊಂಡು, ಅಂಥ ಕೆಲಸಕ್ಕಾಗಿ ಅಂಥ ಕೆಲಸಗಾರನ ಲಿಖಿತ ಒಪ್ಪಿಗೆಗೊಳಪಟ್ಟು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದೈನಂದಿನ ಗರಿಷ್ಠ ಕೆಲಸದ ಗಂಟೆಗಳನ್ನು ಹನ್ನೆರಡು ಗಂಟೆಗಳಿಗೆ ವಿಸ್ತರಿಸಬಹುದು ಹಾಗೂ ಕೆಲಸಗಾರನಿಗಾಗಿ ಸದರಿ ವಾರದ ಉಳಿದ ದಿನಗಳು ಪಾವತಿ ರಜಾ ದಿನಗಳಾಗಿರತಕ್ಕದ್ದು".

**3. 55ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 55ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ 54ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕೆಲಸದ ಗಂಟೆಗಳಲ್ಲಿ ಹೊಂದಾಣಿಕೆಯ ಉಪಬಂಧದಿಂದಾಗಿ, ಅದು ಯುಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಕಾರ್ಖಾನೆಗಳ ಯಾವುದೇ ಗುಂಪು ಅಥವಾ

ವಿಭಾಗ ಅಥವಾ ವರ್ಗದ ಸಂದರ್ಭದಲ್ಲಿ ಮಧ್ಯಂತರವಿಲ್ಲದೆ ಕೆಲಸಗಾರನ ಕೆಲಸದ ಒಟ್ಟು ಗಂಟೆಗಳ ಸಂಖ್ಯೆಯನ್ನು ಆರು ಗಂಟೆಗಳಿಗೆ ವಿಸ್ತರಿಸಬಹುದು.

**4. 56ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 56ನೇ ಪ್ರಕರಣದಲ್ಲಿ,-

(i) ಪ್ರಸ್ತುತವಿರುವ ಉಪಬಂಧಕ್ಕೆ (1) ಎಂಬುದಾಗಿ ಸಂಖ್ಯೆಯನ್ನು ನೀಡತಕ್ಕದ್ದು;

(ii) ಹಾಗೆ ಸಂಖ್ಯೆಯನ್ನು ನೀಡಲಾದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ 54ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕೆಲಸದ ಗಂಟೆಗಳಲ್ಲಿ ಹೊಂದಾಣಿಕೆಯ ಉಪಬಂಧದಿಂದಾಗಿ, ಅದು ಯುಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಕಾರ್ಖಾನೆಗಳ ಯಾವುದೇ ಗುಂಪು ಅಥವಾ ವಿಭಾಗ ಅಥವಾ ವರ್ಗದ ಸಂದರ್ಭದಲ್ಲಿ ಆತನ ವಿರಾಮದ ಮಧ್ಯಂತರಗಳನ್ನು ಒಳಗೊಂಡು ಕೆಲಸದ ವ್ಯಾಪ್ತಿಯನ್ನು ಹನ್ನೆರಡು ಗಂಟೆಯವರೆಗೆ ಹೆಚ್ಚಿಸಬಹುದು".

**5. 59ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 59ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(1) ಯಾವುದೇ ಕಾರ್ಖಾನೆಯಲ್ಲಿ ಕೆಲಸಗಾರನು,-

(i) ಯಾವುದೇ ವಾರದಲ್ಲಿ ಆರು ದಿನಗಳು ಕೆಲಸ ಮಾಡುವಾಗ, ಯಾವುದೇ ದಿನದಲ್ಲಿ ಒಂಭತ್ತು ಗಂಟೆಗಳಿಗಿಂತ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ;

(ii) ಯಾವುದೇ ವಾರದಲ್ಲಿ ಐದು ದಿನಗಳು ಕೆಲಸ ಮಾಡುವಾಗ, ಯಾವುದೇ ದಿನದಲ್ಲಿ ಹತ್ತು ಗಂಟೆಗಳಿಗಿಂತ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ;

(iii) ಯಾವುದೇ ವಾರದಲ್ಲಿ ನಾಲ್ಕು ದಿನಗಳು ಕೆಲಸ ಮಾಡುವಾಗ ಅಥವಾ ಪಾವತಿ ರಜಾ ದಿನಗಳಲ್ಲಿ ಕೆಲಸ ಮಾಡುವಾಗ, ಯಾವುದೇ ದಿನದಲ್ಲಿ ಹನ್ನೊಂದೂವರೆ ಗಂಟೆಗಳಿಗಿಂತ ಹೆಚ್ಚಾಗಿ,

-ಕೆಲಸ ಮಾಡಿದ್ದಲ್ಲಿ, ಆತನು ಅವಧಿ ಮೀರಿದ ಕೆಲಸದ ಸಂದರ್ಭದಲ್ಲಿ ಸಾಮಾನ್ಯ ಮಜೂರಿಯ ದರಗಳಿಗಿಂತ ದುಪ್ಪಟ್ಟು ದರಗಳಲ್ಲಿ ಮಜೂರಿಗಳನ್ನು ಪಡೆಯಲು ಅರ್ಹನಾಗತಕ್ಕದ್ದು"

**6. 65ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 65ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (iv)ರಲ್ಲಿ "ಎಪ್ಪತ್ತೈದು" ಎಂಬ ಪದಗಳ ಬದಲಿಗೆ "ಒಂದು ನೂರಾ ನಲವತ್ತನಾಲ್ಕು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (iv)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(v) ಅಂಥ ಕೆಲಸಕ್ಕಾಗಿ ಅಂಥ ಕೆಲಸಗಾರನ ಲಿಖಿತ ಒಪ್ಪಿಗೆಗೊಳಪಟ್ಟು ಅವಧಿ ಮೀರಿದ ಕೆಲಸಕ್ಕೆ ಕೆಲಸಗಾರನು ಅಗತ್ಯಪಡಿಸತಕ್ಕದ್ದು. "

**7. 66ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 66ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

**"66. ಮಹಿಳೆಯರ ನಿಯೋಜನೆಗೆ ಮತ್ತಷ್ಟು ನಿರ್ಬಂಧ.-** ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ಈ ಅಧ್ಯಾಯದ ಉಪಬಂಧಗಳನ್ನು ಅನ್ವಯಿಸುವುದರಲ್ಲಿ ಈ ಕೆಳಕಂಡ ಮತ್ತಷ್ಟು ನಿರ್ಬಂಧಗಳನ್ನು ಪೂರಕವಾಗಿ ಸೇರಿಸತಕ್ಕದ್ದು, ಎಂದರೆ,-:-

(ಎ) ಕರ್ಖಾನೆಗಳಲ್ಲಿ ಮಹಿಳೆಯರಿಗೆ ಈ ಅಧ್ಯಾಯದ ಉಪಬಂಧಗಳನ್ನು ಅನ್ವಯಿಸುವುದರಲ್ಲಿ ಈ ಕೆಳಕಂಡ ಮತ್ತಷ್ಟು ನಿರ್ಬಂಧಗಳನ್ನು ಪೂರಕವಾಗಿ ಸೇರಿಸತಕ್ಕದ್ದು, ಎಂದರೆ,-

ಪರಂತು, ಈ ಮುಂದಿನ ಷರತ್ತುಗಳಿಗೊಳಪಟ್ಟು, ಯಾವುದೇ ಕಾರ್ಖಾನೆಯಲ್ಲಿ ಒಬ್ಬ ಮಹಿಳೆಯನ್ನು ಬೆಳಿಗ್ಗೆ 6.00ರಿಂದ ಸಂಜೆ 7.00ರ ನಡುವಿನ ಗಂಟೆಗಳಲ್ಲಿ ಕಾರ್ಯನಿರ್ವಹಿಸುವಂತೆ ಅಗತ್ಯಪಡಿಸಬಹುದು ಅಥವಾ ಅನುಮತಿಸಬಹುದು, ಎಂದರೆ:-

(i) ಕೆಲಸ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಕೃತ್ಯ ಎಸಗುವುದನ್ನು ತಡೆಗಟ್ಟುವುದು ಅಥವಾ ನಿರ್ಬಂಧಿಸುವುದು ಮತ್ತು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಲೈಂಗಿಕ ಕಿರುಕುಳ ಕೃತ್ಯಗಳ ನಿರ್ಣಯ, ಹೇಳಿಕೆ ಅಥವಾ ಅಭಿಯೋಜನೆಗಳಿಗಾಗಿ ಕಾರ್ಯವಿಧಾನವನ್ನು ಕಲ್ಪಿಸುವುದು ನಿಯೋಜಕರ ಅಥವಾ ಇತರ ಜವಾಬ್ದಾರಿಯುತ ವ್ಯಕ್ತಿಗಳ ಕರ್ತವ್ಯವಾಗಿರತಕ್ಕದ್ದು;

(ii) ಪ್ರತ್ಯಕ್ಷವಾಗಿ ಆಗಲಿ ಅಥವಾ ಇಂಗಿತದ ಮೂಲಕವಾಗಲಿ ಅಸ್ವಾಗತಾರ್ಹ ಲೈಂಗಿಕ ನಿರ್ಧರಿತ ನಡವಳಿಕೆ ಅಥವಾ ಸಂಪರ್ಕವನ್ನು ಹೊಂದಲು ಮುಂದುವರೆಯುವುದು ಅಥವಾ ಸಂಪರ್ಕ ಸಾಧಿಸುವುದು ಅಥವಾ ಲೈಂಗಿಕ ಸಮ್ಮತಿಯನ್ನು ಕೋರುವುದು ಅಥವಾ ಲೈಂಗಿಕ ಹಾವಭಾವ ತೋರುವುದು ಅಥವಾ ನಗ್ನಚಿತ್ರಗಳನ್ನು ತೋರಿಸುವುದು ಅಥವಾ ಲೈಂಗಿಕ ಸ್ವರೂಪದ ಯಾವುದೇ ಇತರ ಅಸ್ವಾಗತಾರ್ಹ ದೈಹಿಕ, ಮೌಖಿಕ ಅಥವಾ ಮೌಖಿಕವಲ್ಲದ ಸಂಪರ್ಕದಂಥ ಯಾವುದೇ ನಮೂನೆಯಲ್ಲಿ ಲೈಂಗಿಕ ಕಿರುಕುಳದ ನಿರ್ಬಂಧವನ್ನು ಅಭಿವ್ಯಕ್ತಿಸುವುದು;

(iii) ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಯಾವುದೇ ಪ್ರತಿಕೂಲ ವಾತಾವರಣವಿಲ್ಲವೆಂದು ಮತ್ತಷ್ಟು ಖಚಿತಪಡಿಸಿಕೊಳ್ಳಲು ಕೆಲಸಗಳು, ವಿರಾಮ, ಆರೋಗ್ಯ ಮತ್ತು ನೈರ್ಮಲ್ಯದ ಸಂಬಂಧದಲ್ಲಿ ಸೂಕ್ತ ಕೆಲಸ ಮಾಡುವ ವಾತಾವರಣವನ್ನು ಕಲ್ಪಿಸುವುದು ಮತ್ತು ಯಾರೇ ಮಹಿಳಾ ಉದ್ಯೋಗಿಯೂ ತನ್ನ ಉದ್ಯೋಗದ ಸಂಬಂಧದಲ್ಲಿ ಆಕೆಯನ್ನು ವಂಚಿಸಲಾಗುತ್ತಿದೆಯೆಂದು ನಂಬುವಂತಹ ಯುಕ್ತ ಕಾರಣಗಳನ್ನು ಹೊಂದಿರತಕ್ಕದ್ದಲ್ಲ;

(iv) ನಿಯೋಜಕನು ಕಾರ್ಖಾನೆಯಲ್ಲಿಯೇ ಒಂದು ದೂರು ನಿವಾರಣಾ ಕಾರ್ಯವ್ಯವಸ್ಥೆಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಕಾರ್ಯವ್ಯವಸ್ಥೆಯು ಕಾಲಬದ್ಧ ದೂರು ನಿರ್ವಹಣೆಯನ್ನು ಖಚಿತಪಡಿಸತಕ್ಕದ್ದು. ಅಂಥ ಕಾರ್ಯವ್ಯವಸ್ಥೆಯು, ಅವಶ್ಯವಾದಾಗಲೆಲ್ಲಾ ಗೌಪ್ಯತೆಯನ್ನು ಕಾಪಾಡುವುದೂ ಒಳಗೊಂಡಂತೆ ದೂರು ಸಮಿತಿ, ವಿಶೇಷ ಸಮಾಲೋಚಕರು ಅಥವಾ ಇತರೆ ಪೂರಕ ಸೇವೆಗಳನ್ನು ಕಲ್ಪಿಸತಕ್ಕದ್ದು;

(v) ಮಹಿಳಾ ಉದ್ಯೋಗಿಗಳು, ಕಾರ್ಮಿಕರ ಸಭೆಗಳಲ್ಲಿ ಮತ್ತು ಇತರ ಯುಕ್ತ ವೇದಿಕೆಗಳಲ್ಲಿ ಕೆಲಸಗಾರರಿಗೆ ಲೈಂಗಿಕ ಕಿರುಕುಳದ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ನೀಡತಕ್ಕದ್ದು;

(vi) ನಿಯೋಜಕನು, ಕಾರ್ಖಾನೆಯ ಒಳಗಷ್ಟೇ ಅಲ್ಲದೇ ಕಾರ್ಖಾನೆಯ ಸುತ್ತಮುತ್ತಲೂ ಹಾಗೂ ಕೆಲಸದ ವೇಳೆಯ ಸಂದರ್ಭದಲ್ಲಿ ಮಹಿಳೆ ಕಾರ್ಮಿಕರು ಓಡಾಡುವುದು ಅಗತ್ಯವಾಗಿರುವ ಎಲ್ಲಾ ಸ್ಥಳಗಳಲ್ಲೂ ಸರಿಯಾದ ಬೆಳಕು ಮತ್ತು ಸಿಸಿಟಿವಿ ಕವರೇಜ್ ಅನ್ನು ಕಲ್ಪಿಸತಕ್ಕದ್ದು. ಸಿಸಿಟಿವಿ ಕವರೇಜನ್ನು ನಲವತ್ತೈದು ದಿನಗಳಿಗಿಂತ ಕಡಿಮೆಯಿಲ್ಲದಂತೆ ಸಂಗ್ರಹವಾಗಿಡತಕ್ಕದ್ದು;

(vii) ನಿಯೋಜಕನು, ಮಹಿಳಾ ಕಾರ್ಮಿಕರನ್ನು ಹತ್ತಕ್ಕಿಂತ ಕಡಿಮೆಯಿಲ್ಲದ ತಂಡದಲ್ಲಿ ನಿಯೋಜಿಸಲಾಗಿದೆ ಎಂಬುದನ್ನು ಗಮನಿಸತಕ್ಕದ್ದು;

(viii) ರಾತ್ರಿ ಪಾಳಿಯಲ್ಲಿ ಪ್ರವೇಶ ಹಾಗೂ ನಿಗರ್ಮನ ದ್ವಾರಗಳಲ್ಲಿ ಸಾಕಷ್ಟು ಮಹಿಳಾ ಭದ್ರತೆಯನ್ನು ಕಲ್ಪಿಸತಕ್ಕದ್ದು;

(ix) ಮಹಿಳಾ ಕಾರ್ಮಿಕರು ಮುಂಚಿತವಾಗಿ ಆಗಮಿಸಲು ಮತ್ತು ಕೆಲಸದ ವೇಳೆಗಳ ತರುವಾಯ ನಿರ್ಗಮಿಸಲು ಸಾಕಷ್ಟು ಸಂಖ್ಯೆಯ ವಿಶ್ರಾಂತಿ ಕೊಠಡಿಗಳನ್ನು ಕಲ್ಪಿಸತಕ್ಕದ್ದು;

(x) ನಿಯೋಜಕರು, ಮಹಿಳಾ ಕಾರ್ಮಿಕರಿಗೆ ಅವರ ಮನೆಯಿಂದ ಕೆಲಸದ ಸ್ಥಳದವರೆಗೆ ಮತ್ತು ಅಲ್ಲಿಂದ ಹಿಂದಿರುಗಲು (ರಾತ್ರಿ ಪಾಳಿಗಾಗಿ) ಸಾರಿಗೆ ಸೌಲಭ್ಯವನ್ನು ಮತ್ತು ಭದ್ರತಾ ಸಿಬ್ಬಂದಿಯನ್ನು (ಮಹಿಳಾ ಭದ್ರತಾ ಸಿಬ್ಬಂದಿಯನ್ನು ಒಳಗೊಂಡಂತೆ) ಒದಗಿಸತಕ್ಕದ್ದು ಮತ್ತು ಪ್ರತಿಯೊಂದು ಸಾರಿಗೆ ವಾಹನವು ಸಿಸಿಟಿವಿ ಕ್ಯಾಮರ ಮತ್ತು ಜಿಪಿಎಸ್‌ನೊಂದಿಗೆ ಸುಸಜ್ಜಿತವಾಗಿರತಕ್ಕದ್ದು;

(xi) ರಾತ್ರಿಪಾಳಿಯಲ್ಲಿ ಪಾಳಿಪ್ರಭಾರದಲ್ಲಿರುವ ಮೇಲ್ವಿಚಾರಕರು ಅಥವಾ ಫೋರ್‌ಮೆನ್ ಅಥವಾ ಇತರ ಮೇಲ್ವಿಚಾರಣಾ ಸಿಬ್ಬಂದಿಯ ವೃಂದಬಲದ 1/3ನೇ ಭಾಗಕ್ಕಿಂತ ಕಡಿಮೆಯಲ್ಲದ್ದಷ್ಟು ಮಹಿಳೆಯರಿರತಕ್ಕದ್ದು.

(xii) ಬೆಳಗಿನ ಪಾಳಿಯಿಂದ ರಾತ್ರಿ ಪಾಳಿಗೆ ಹಾಗೆಯೇ ರಾತ್ರಿ ಪಾಳಿಯಿಂದ ಬೆಳಗಿನ ಪಾಳಿಗೆ ಮಹಿಳಾ ಕಾರ್ಮಿಕರನ್ನು ಬದಲಾಯಿಸಿದಾಗಲೆಲ್ಲಾ ಹಿಂದಿನ ಪಾಳಿಗಳು ಮತ್ತು ರಾತ್ರಿಪಾಳಿಯ ನಡುವಿನ ವಿರಾಮ ಅಥವಾ ಅಂತರವು ನಿರಂತರ ಹನ್ನೆರಡುಗಂಟೆಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ;

(xiii) ಕಾರ್ಯಸಂಸ್ಥೆಯು ಪ್ರತಿಯೊಬ್ಬ ಚಾಲಕನ ವಯಕ್ತಿಕ ವಿವರಣೆ ಮತ್ತು ತಾವಾಗಿಯೇ ಉದ್ಯೋಗವನ್ನು ಪಡೆದ ಎಲ್ಲಾ ಚಾಲಕರ ಹಿಂದಿನ ಉದ್ಯೋಗದ ಪೂರ್ವ ಇತಿಹಾಸವನ್ನು ಪರಿಶೀಲಿಸತಕ್ಕದ್ದು. ಹೊರಗುತ್ತಿಗೆಯ ಮೂಲಕ ಉದ್ಯೋಗ ಪಡೆದ ಚಾಲಕರಿಗೆ ಸಂಬಂಧಿಸಿದಂತೆ ಕಂಪನಿಯು, ಸೇವಾದಾತನು ಚಾಲಕರ ವಯಕ್ತಿಕ ವಿವರಣೆ ಸಂಗ್ರಹಣೆ ಮತ್ತು ಹಿಂದಿನ ಉದ್ಯೋಗದ ಪೂರ್ವ ಇತಿಹಾಸವನ್ನು ಪರಿಶೀಲನೆ ನಡೆಸಿರುವುದು ತನಗೆ ತೃಪ್ತಿದಾಯಕವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(xiv) ಮಹಿಳಾ ಉದ್ಯೋಗಿಗಳ ದೂರವಾಣಿ ಸಂಖ್ಯೆ, ವಿಶೇಷವಾಗಿ ಮೊಬೈಲ್ ಸಂಖ್ಯೆಗಳು, ಇ-ಮೇಲ್ ಐಡಿ ಮತ್ತು ವಿಳಾಸವನ್ನು ಅನಧಿಕೃತ ವ್ಯಕ್ತಿಗಳಿಗೆ ಬಹಿರಂಗಗೊಳಿಸತಕ್ಕದ್ದಲ್ಲ;

(xv) ಯಾರೇ ಮಹಿಳಾ ಉದ್ಯೋಗಿಗಳನ್ನು ಮೊದಲ ಸ್ಥಳದಲ್ಲಿ ಹತ್ತಿಸಿಕೊಳ್ಳದಂಥ ಮತ್ತು ಕೊನೆಯಲ್ಲಿ ಇಳಿಸದಂಥ ರೀತಿಯಲ್ಲಿ ಎಚ್ಚರಿಕೆಯಿಂದ ಮಾರ್ಗಗಳ ಆಯ್ಕೆಯನ್ನು ಮಾಡತಕ್ಕದ್ದು;

(xvi) ರಾತ್ರಿಪಾಳಿಗಳಲ್ಲಿ ಕೆಲಸ ಮಾಡುವಂತೆ ಯಾವೊಬ್ಬ ಮಹಿಳಾ ನೌಕರರಿಗೆ ಕಡ್ಡಾಯ ಅಥವಾ ಕಟ್ಟುಪಾಡು ಮಾಡತಕ್ಕದ್ದಲ್ಲ. ರಾತ್ರಿಪಾಳಿಗಳಲ್ಲಿ ಕೆಲಸ ಮಾಡುವ ಆಸಕ್ತಿಯಿರುವ ಮಹಿಳಾ ನೌಕರರಿಂದ ಲಿಖಿತ ಸಮ್ಮತಿಯನ್ನು ಪಡೆಯತಕ್ಕದ್ದು.

(ಬಿ) ವಾರದ ರಜೆ ಅಥವಾ ಯಾವುದೇ ಇತರ ರಜೆಯ ತರುವಾಯ ಹೊರತು ಪಾಳಿಗಳಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(i) ಇನ್ನಷ್ಟು ಆರ್ಥಿಕ ಚಟುವಟಿಕೆಗಳು ಮತ್ತು ಉದ್ಯೋಗಾವಕಾಶಗಳನ್ನು ಸೃಜಿಸಲು ಯಾವುದೇ ವಾರದಲ್ಲಿ ಗರಿಷ್ಠ 48 ಗಂಟೆಗಳಿಗೊಳಪಟ್ಟು ಯಾವುದೇ ದಿನದಲ್ಲಿ ವಿರಾಮ ಮಧ್ಯಂತರಗಳನ್ನು ಒಳಗೊಂಡಂತೆ ಪ್ರಸ್ತುತದಲ್ಲಿರುವ ಕೆಲಸದ ಗಂಟೆಗಳ ಅವಧಿಯನ್ನು ಒಂಬತ್ತು ಗಂಟೆಗಳಿಂದ ಹನ್ನೆರಡು ಗಂಟೆಗಳವರೆಗೆ ಹೆಚ್ಚಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ;

(ii) ಕೆಲಸದ ಗಂಟೆಗಳಲ್ಲಿ ಹೊಂದಾಣಿಕೆಯ ಉಪಬಂಧಗಳಿಂದಾಗಿ ದೈನಂದಿನ ಗರಿಷ್ಠ ಕೆಲಸದ ಅವಧಿಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಕಾರ್ಖಾನೆಗಳ ಯಾವುದೇ ಗುಂಪು ಅಥವಾ ವರ್ಗ ಅಥವಾ ವಿವರಣೆಗೆ ಕೆಲಸಗಾರನ ಒಟ್ಟು ಕೆಲಸದ ಗಂಟೆಗಳ ಅವಧಿಯನ್ನು ಮಧ್ಯಂತರವಿಲ್ಲದೆ ಆರು ಗಂಟೆಗಳವರೆಗೆ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ;

(iii) ಯಾವುದೇ ದಿನದಲ್ಲಿ ಅಥವಾ ಯಾವುದೇ ವಾರದಲ್ಲಿನ ಅವಧಿ ಮೀರಿದ ಕೆಲಸದ ಸಂದರ್ಭದಲ್ಲಿ ಸಾಮಾನ್ಯ ದರಕ್ಕಿಂತ ದುಪ್ಪಟ್ಟು ದರದಲ್ಲಿ ಮಜೂರಿಯನ್ನು ಕೆಲಸಗಾರನಿಗೆ ಪಾವತಿಸಬೇಕಾದ ಕೆಲಸದ ವೇಳೆಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ;

(iv) ಅಸಾಧಾರಣವಾದ ಕೆಲಸದ ಒತ್ತಡವನ್ನು ನಿಭಾಯಿಸಲು ಹೆಚ್ಚಿನ ಸಮಯದವರೆಗೆ ಕಾರ್ಮಿಕರನ್ನು ತೊಡಗಿಸಿಕೊಳ್ಳಲು ಕಾರ್ಖಾನೆಗಳಿಗೆ ಅವಕಾಶ ಕಲ್ಪಿಸುವುದಕ್ಕಾಗಿ;

(v) ದುಡಿಮೆ ಮತ್ತು ಗಳಿಕೆಯಲ್ಲಿ ಸಮಾನತೆ ಮತ್ತು ಸಮಾನ ಅವಕಾಶವನ್ನು ಕಲ್ಪಿಸಿ ಅವಧಿ ಮೀರಿದ ಕೆಲಸಕ್ಕಾಗಿ (overtime) ಮಹಿಳಾ ಕೆಲಸಗಾರರಿಗೆ ಅನುವು ಮಾಡಿಕೊಡುವುದಕ್ಕಾಗಿ ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಆಸಕ್ತಿ ಹೊಂದಿರುವ ಮಹಿಳಾ ಕೆಲಸಗಾರರಿಂದ ಲಿಖಿತ ಒಪ್ಪಿಗೆಯನ್ನು ಪಡೆಯುವುದರೊಂದಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸುರಕ್ಷತೆ ಮತ್ತು ಆರೋಗ್ಯವನ್ನು ಭದ್ರಪಡಿಸಲು ಷರತ್ತುಳಿಗೊಳಪಟ್ಟು ಇಪ್ಪತ್ನಾಲ್ಕು ಗಂಟೆಗಳ ಕಾಲ ಕೆಲಸ ಮಾಡಲು ಮಹಿಳೆಯರನ್ನು ಸಶಕ್ತಗೊಳಿಸುವುದಕ್ಕಾಗಿ,

- ಕಾರ್ಖಾನೆಗಳ ಅಧಿನಿಯಮ, 1948(1948ರ ಕೇಂದ್ರ ಅಧಿನಿಯಮ 63)ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚನ್ನು ಒಳಗೊಂಡಿರುವುದಿಲ್ಲ.

**ಅರಬೈಲ್ ಹೆಬ್ಬಾರ್ ಶಿವರಾಮ್**
ಕಾರ್ಮಿಕ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕಾರ್ಖಾನೆಗಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ 63)ರ ಉದ್ಧೃತ ಭಾಗ

**54. ದಿನದಲ್ಲಿ ಕೆಲಸದ ಗಂಟೆಗಳು.-** 51ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾರೇ ವಯಸ್ಕ ಕೆಲಸಗಾರನನ್ನು ಯಾವುದೇ ದಿವಸ ಒಂಬತ್ತು ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಹಾಗೆ ಮಾಡಲು ಅನುಮತಿ ಕೊಡತಕ್ಕದ್ದಲ್ಲ:

ಪರಂತು, ಮುಖ್ಯ ಪರಿಶೀಲಕನ ಪೂರ್ವಾನುಮೋದನೆಗೆ ಒಳಪಟ್ಟು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ದಿನದಲ್ಲಿನ ಗರಿಷ್ಠ ಕೆಲಸದ ಘಂಟೆಗಳನ್ನು ಪಾಳಿಗಳ ಬದಲಾವಣೆಗೆ ಅನುಕೂಲ ಮಾಡಿಕೊಡಲು ಹೆಚ್ಚಿಸಬಹುದು.

**XXX XXX XXX**

**55. ವಿಶ್ರಾಂತಿಗಾಗಿ ಬಿಡುವುಗಳು.-** (1) ಪ್ರತಿದಿವಸ ಕಾರ್ಖಾನೆಯಲ್ಲಿನ ವಯಸ್ಕ ಕೆಲಸಗಾರರ ಕೆಲಸದ ಅವಧಿಗಳನ್ನು, ಯಾವುದೇ ಅವಧಿಯು ಐದು ಗಂಟೆಗಳನ್ನು ಮೀರದ ಹಾಗೆ ಮತ್ತು ಯಾರೇ ಕೆಲಸಗಾರನು ಕನಿಷ್ಠ ಪಕ್ಷ ಅರ್ಧ ಗಂಟೆ ವಿಶ್ರಾಂತಿಗೆ ಬಿಡುವನ್ನು ಪಡೆಯುವುದಕ್ಕೆ ಮುಂಚೆ ಅವನು ಐದು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡದ ಹಾಗೆ ನಿಗದಿಪಡಿಸತಕ್ಕದ್ದು.

(2) ರಾಜ್ಯ ಸರ್ಕಾರವು ಅಥವಾ, ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಮುಖ್ಯ ಪರಿಶೀಲಕನು, ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ಯಾವುದೇ ಕಾರ್ಖಾನೆಯನ್ನು (1)ನೇ ಉಪಪ್ರಕರಣದ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು. ಆದಾಗ್ಯೂ, ಬಿಡುವಿಲ್ಲದೇ ಕೆಲಸಗಾರನು ಕೆಲಸ ಮಾಡಿದ ಗಂಟೆಗಳ ಒಟ್ಟು ಸಂಖ್ಯೆಯು ಆರನ್ನು ಮೀರತಕ್ಕದ್ದಲ್ಲ.

**XXX XXX XXX**

**56. ವಿಸ್ತಾರ.-** ಕಾರ್ಖಾನೆಯಲ್ಲಿನ ವಯಸ್ಕ ಕೆಲಸಗಾರನ ಕೆಲಸದ ಅವಧಿಗಳನ್ನು 55ನೇ ಪ್ರಕರಣದ ಮೇರೆಗೆ ಅವನ ವಿಶ್ರಾಂತಿ ಬಿಡುವುಗಳನ್ನೂ ಒಳಗೊಂಡು ಯಾವುದೇ ದಿವಸದಲ್ಲಿ ಹತ್ತುವರೆ ಗಂಟೆಗಳಿಗಿಂತ ಹೆಚ್ಚಿಗೆ ವಿಸ್ತಾರವಾಗದಂತೆ ವ್ಯವಸ್ಥೆ ಮಾಡತಕ್ಕದ್ದು:

ಪರಂತು, ಮುಖ್ಯ ಪರಿಶೀಲಕನು, ಲಿಖಿತದಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ವಿಸ್ತಾರವನ್ನು ಹನ್ನೆರಡು ಗಂಟೆಗಳವರೆಗೆ ಹೆಚ್ಚಿಸಬಹುದು.

**XXX XXX XXX**

**59. ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಹೆಚ್ಚಿನ ಮಜೂರಿ.-** (1) ಕಾರ್ಖಾನೆಯಲ್ಲಿ ಕೆಲಸಗಾರನು ಯಾವುದೇ ಒಂದು ದಿವಸದಲ್ಲಿ ಒಂಬತ್ತು ಗಂಟೆಗಳಿಗಿಂತಲೂ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತಲೂ ಹೆಚ್ಚಾಗಿ ಕೆಲಸ ಮಾಡಿದ್ದರೆ, ಅವನು ಅವಧಿಗೂ ಮೀರಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಅವನ ಸಾಮಾನ್ಯ ಮಜೂರಿ ದರದ ಎರಡರಷ್ಟು ದರದಲ್ಲಿ ಮಜೂರಿಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ``ಸಾಮಾನ್ಯ ಮಜೂರಿ ದರ'' ಎಂದರೆ ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬರುವ, ಕೆಲಸಗಾರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವ ಅನುಕೂಲಕ್ಕೆ ಸಮಾನವಾದ ನಗದನ್ನೂ ಒಳಗೊಂಡು, ಮೂಲ ಮಜೂರಿಗಳು ಮತ್ತು ಭತ್ಯೆಗಳು ಎಂದು ಅರ್ಥ, ಆದರೆ ಅದು ಬೋನಸ್ಸನ್ನು ಮತ್ತು ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿನ ಮಜೂರಿಗಳನ್ನು ಒಳಗೊಳ್ಳುವುದಿಲ್ಲ.

(3) ಕಾರ್ಖಾನೆಯಲ್ಲಿ ಯಾರೇ ಕೆಲಸಗಾರರಿಗೆ ತುಂಡು ದರದ ಆಧಾರದ ಮೇಲೆ ಸಂದಾಯ ಮಾಡುತ್ತಿದ್ದರೆ, ವೇಳಾದರವನ್ನು, ಯಾವ ಕ್ಯಾಲೆಂಡರ್ ತಿಂಗಳಲ್ಲಿ ಅವಧಿಗೂ ಮೀರಿ ಕೆಲಸ ಮಾಡಲಾಗಿದೆಯೋ ಆ ಕ್ಯಾಲೆಂಡರ್ ತಿಂಗಳಿನ ನಿಕಟಪೂರ್ವದ ತಿಂಗಳಿನಲ್ಲಿ ಯಾವ ದಿನಗಳಂದು ಅದೇ, ಅಥವಾ ಅದೇ ವಿಧದ ಕೆಲಸವನ್ನು ಅವರು ವಾಸ್ತವವಾಗಿ ಮಾಡಿದ್ದಾರೋ ಆ ದಿವಸಗಳಿಗಾಗಿ ಅವರ ಪೂರ್ಣಕಾಲಿಕ ಗಳಿಕೆಗಳ ದಿನದ ಸರಾಸರಿಗೆ ಸಮವೆಂದು ಭಾವಿಸತಕ್ಕದ್ದು ಮತ್ತು ಅಂಥ ವೇಳಾ ದರಗಳನ್ನು ಆ ಕೆಲಸಗಾರರ ಸಾಮಾನ್ಯ ಮಜೂರಿ ದರವೆಂದು ಭಾವಿಸತಕ್ಕದ್ದು:

ಪರಂತು, ಕೆಲಸಗಾರನು, ಕ್ಯಾಲೆಂಡರ್ ತಿಂಗಳಿನ ನಿಕಟಪೂರ್ವದಲ್ಲಿ ಅದೇ ಅಥವಾ ಅದೇ ವಿಧದ ಕೆಲಸವನ್ನು ಮಾಡಿಲ್ಲದ ಸಂದರ್ಭದಲ್ಲಿ, ವೇಳಾದರವು ಯಾವ ವಾರದಲ್ಲಿ ಅವಧಿಗೂ ಮೀರಿ ಕೆಲಸ ಮಾಡಲಾಯಿತೋ ಆ ವಾರದಲ್ಲಿ ಅವನು ವಾಸ್ತವವಾಗಿ ಕೆಲಸ ಮಾಡಿದ ದಿವಸಗಳಲ್ಲಿ ಕೆಲಸಗಾರನ ಗಳಿಕೆಯ ದಿನದ ಸರಾಸರಿಗೆ ಸಮವೆಂದು ಭಾವಿಸತಕ್ಕದ್ದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಕೆಲಸಗಾರನು ವಾಸ್ತವವಾಗಿ ಕೆಲಸ ಮಾಡಿದ ದಿನಗಳಿಗಾಗಿ ಆ ಗಳಿಕೆಯನ್ನು ಲೆಕ್ಕ ಹಾಕುವಾಗ ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬರುವ, ಕೆಲಸಗಾರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವ ಅನುಕೂಲಕ್ಕೆ ಸಮಾನವಾದ ನಗದನ್ನೂ ಒಳಗೊಂಡು, ಅಂಥ ಭತ್ಯೆಗಳನ್ನು ಸೇರಿಸತಕ್ಕದ್ದು, ಆದರೆ ಆ ಗಳಿಕೆಯನ್ನು ಯಾವ ಅವಧಿಗೆ ಲೆಕ್ಕ ಹಾಕಲಾಗುತ್ತಿದೆಯೋ ಆ ಅವಧಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾದ ಯಾವುದೇ ಬೋನಸ್ಸನ್ನು ಅಥವಾ ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಕೊಡುವ ಮಜೂರಿಗಳನ್ನು ಹೊರತುಪಡಿಸತಕ್ಕದ್ದು.

**65. ವಿನಾಯಿತಿಗೊಳಿಸುವ ಆದೇಶಗಳನ್ನು ಮಾಡಲು ಅಧಿಕಾರ.-** (1) ನಡೆಸಲಾಗುತ್ತಿರುವ ಕೆಲಸದ ಸ್ವರೂಪ ಅಥವಾ ಇತರ ಸಂದರ್ಭಗಳ ಕಾರಣದಿಂದಾಗಿ ಯಾವುದೇ ಕಾರ್ಖಾನೆಯಲ್ಲಿ ಅಥವಾ ಕಾರ್ಖಾನೆಗಳ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ಯಾರೇ ವಯಸ್ಕ ಕೆಲಸಗಾರರ ಕೆಲಸದ ಅವಧಿಗಳನ್ನು ಮೊದಲೇ ನಿಗದಿಪಡಿಸತಕ್ಕದ್ದೆಂದು ಅಗತ್ಯಪಡಿಸುವುದು ಯುಕ್ತವಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾಗಿರುವಲ್ಲಿ, ಅದು ಲಿಖಿತ ಆದೇಶದ ಮೂಲಕ, ಅದರಲ್ಲಿನ ಅಂಥ ಕೆಲಸಗಾರರಿಗೆ ಸಂಬಂಧಿಸಿದಂತೆ, 61ನೇ ಪ್ರಕರಣದ ಉಪಬಂಧಗಳನ್ನು ಅದು

ಸೂಕ್ತವೆಂದು ಯೋಚಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ಮತ್ತು ಕೆಲಸದ ಅವಧಿಗಳ ಮೇಲೆ ನಿಯಂತ್ರಣವನ್ನು ಸುನಿಶ್ಚಿತಗೊಳಿಸಲು ಅದು ವಿಹಿತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಸಡಿಲಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಮುಖ್ಯ ಪರಿಶೀಲಕನು ಲಿಖಿತ ಆದೇಶದ ಮೂಲಕ ಅದು ಅಥವಾ ಅವನು ವಿಹಿತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಯಾವುದೇ ಕಾರ್ಖಾನೆ ಅಥವಾ ಗುಂಪು ಅಥವಾ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿನ ಯಾರೇ ಅಥವಾ ಎಲ್ಲ ವಯಸ್ಕ ಕೆಲಸಗಾರರನ್ನು, ಕೆಲಸದ ವಿಶೇಷ ಒತ್ತಡದೊಡನೆ ವ್ಯವಹರಿಸಲು ಆ ಕಾರ್ಖಾನೆ ಅಥವಾ ಕಾರ್ಖಾನೆಗಳನ್ನು ಶಕ್ತಗೊಳಿಸಲು ಆ ವಿನಾಯತಿಯು ಅಗತ್ಯವಾಗಿದೆ ಎಂಬ ಕಾರಣದ ಮೇಲೆ 51, 52, 54 ಮತ್ತು 56ನೇ ಪ್ರಕರಣಗಳ ಯಾವುದೇ ಅಥವಾ ಎಲ್ಲ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ನೀಡಿದ ಯಾವುದೇ ವಿನಾಯಿತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ:-

(i) ಯಾವುದೇ ದಿವಸದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಹನ್ನೆರಡು ಗಂಟೆಗಳನ್ನು ಮೀರತಕ್ಕದ್ದಲ್ಲ;

(ii) ವಿಶ್ರಾಂತಿ ಬಿಡುವುಗಳನ್ನು ಒಳಗೊಂಡು, ಆ ವಿಸ್ತರಣೆಯೂ ಯಾವುದೇ ಒಂದು ಇಡೀ ದಿವಸದಲ್ಲಿ ಹದಿಮೂರು ಗಂಟೆಗಳನ್ನು ಮೀರತಕ್ಕದ್ದಲ್ಲ;

(iii) ಅವಧಿ ಮೀರಿದ ಕೆಲಸವನ್ನು ಒಳಗೊಂಡಂತೆ ಯಾವುದೇ ವಾರದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಅರವತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ;

(iv) ಯಾರೇ ಕೆಲಸಗಾರನು, ಒಂದೇ ಸಮನೆ ಏಳು ದಿವಸಗಳಿಗಿಂತ ಹೆಚ್ಚಿಗೆ ಅವಧಿ ಮೀರಿದ ಕೆಲಸವನ್ನು ಮಾಡಲು ಅವಕಾಶ ಕೊಡತಕ್ಕದ್ದಲ್ಲ ಮತ್ತು ಯಾವುದೇ ತ್ರೈಮಾಸಿಕದಲ್ಲಿ ಅವಧಿ ಮೀರಿದ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಎಪ್ಪತ್ತೈದು ಗಂಟೆಗಳನ್ನು ಮೀರತಕ್ಕದ್ದಲ್ಲ.

**ವಿವರಣೆ:-** ಈ ಉಪಪ್ರಕರಣದಲ್ಲಿ ತ್ರೈಮಾಸಿಕವು 64ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರುತ್ತದೆ.

**XXX XXX XXX**

**66. ಮಹಿಳೆಯರ ನಿಯೋಜನೆಗೆ ಮತ್ತಷ್ಟು ನಿರ್ಬಂಧಗಳು.-** (1) ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ಈ ಅಧ್ಯಾಯದ ಉಪಬಂಧಗಳನ್ನು ಅನ್ವಯಿಸುವುದರಲ್ಲಿ ಈ ಕೆಳಕಂಡ ಮತ್ತಷ್ಟು ನಿರ್ಬಂಧಗಳನ್ನು ಪೂರಕವಾಗಿ ಸೇರಿಸತಕ್ಕದ್ದು, ಎಂದರೆ,-

(ಎ) ಯಾರೇ ಮಹಿಳೆಗೆ ಸಂಬಂಧಿಸಿದಂತೆ 54ನೇ ಪ್ರಕರಣದ ಉಪಬಂಧಗಳಿಂದ ಯಾವುದೇ ವಿನಾಯತಿಯನ್ನು ಕೊಡತಕ್ಕದ್ದಲ್ಲ;

(ಬಿ) ಯಾವುದೇ ಕಾರ್ಖಾನೆಯಲ್ಲಿ ಯಾರೇ ಮಹಿಳೆಯನ್ನು ಬೆಳಗಿನ 6 ಗಂಟೆಯಿಂದ ಮತ್ತು ರಾತ್ರಿ 7 ಗಂಟೆಯ ನಡುವೆ ಹೊರತು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅವಕಾಶ ಕೊಡತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಯಾವುದೇ ಕಾರ್ಖಾನೆ ಅಥವಾ ಗುಂಪು ಅಥವಾ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ (ಬಿ) ಖಂಡದಲ್ಲಿ ವಿಧಿಸಿದ ಪರಿಮಿತಿಗಳನ್ನು ವ್ಯತ್ಯಸ್ತಗೊಳಿಸಬಹುದು. ಆದರೆ ಅಂಥ ವ್ಯತ್ಯಾಸವು ರಾತ್ರಿ 10 ಗಂಟೆಯಿಂದ ಮತ್ತು ಬೆಳಗಿನ 5 ಗಂಟೆಗಳ ನಡುವೆ ಯಾರೇ ಮಹಿಳೆಯ ನಿಯೋಜನೆಯನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(ಸಿ) ವಾರದ ರಜಾ ದಿನ ಅಥವಾ ಯಾವುದೇ ಇತರ ರಜಾದಿನದ ತರುವಾಯ ಹೊರತು ಪಾಳಿಗಳನ್ನು ಬದಲಾಯಿಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಅದು ನಿಯಮಿಸಬಹುದಾದಷ್ಟರಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಯಾವ ಮೀನು ಸಂಸ್ಕರಣೆ ಅಥವಾ ಮೀನುಗಳನ್ನು ಡಬ್ಬಿಗೆ ತುಂಬುವ ಕಾರ್ಖಾನೆಗಳಲ್ಲಿ ಸದರಿ ನಿರ್ಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಗಂಟೆಗಳನ್ನು ಮೀರಿ ಮಹಿಳೆಯರ ನಿಯೋಜನೆಯು ಯಾವುದೇ ಕಚ್ಚಾ ಸಾಮಗ್ರಿಗೆ ಹಾನಿಯನ್ನು ಅಥವಾ ಅದರ ದುಸ್ಥಿತಿಯನ್ನು ತಡೆಗಟ್ಟಲು ಅವಶ್ಯವಿರುವುದೋ ಆ ಮೀನು ಸಂಸ್ಕರಣ ಅಥವಾ ಮೀನುಗಳನ್ನು ಡಬ್ಬಿಗೆ ತುಂಬುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ (1)ನೇ ಉಪಪ್ರಕರಣದಲ್ಲಿ ವಿವರಿಸಿದ ನಿರ್ಬಂಧಗಳಿಂದ ವಿನಾಯತಿಗಾಗಿ ಉಪಬಂಧಿಸುವ ನಿಯಮಗಳನ್ನು ರಚಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳು ಒಂದು ಸಲಕ್ಕೆ ಮೂರು ವರ್ಷಗಳನ್ನು ಮೀರದ ಅವಧಿಗೆ ಜಾರಿಯಲ್ಲಿರತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 21ನೇ ಫೆಬ್ರವರಿ, 2023

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**FIFTEENTH SESSION**

# THE FACTORIES (KARNATAKA AMENDMENT) BILL, 2023

**(LA Bill No. 04 of 2023)**

A Bill further to amend the Factories Act, 1948 in its application to the State of Karnataka.

Whereas, it is expedient further to amend the Factories Act, 1948 (Central Act LXIII of 1948) in its application to the state of Karnataka for the purposes hereinafter appearing;

Be it enacted by the Karnataka State Legislature in the Seventy-fourth Year of the Republic of India, as follows:-

**1. Short title and commencement:-** (1) This Act may be called the Factories (Karnataka Amendment) Act, 2023.

(2) It shall come into force at once.

**2. Amendment of section 54**:- In section 54 of the Factories Act, 1948 (Central Act LXIII of 1948) (hereinafter referred to as the Principal Act),-

(i) the existing provision shall be numbered as sub-section (1); and

(ii) after sub-section (1) so numbered, the following shall be inserted namely:-

"(2) The State Government may by notification in the official Gazette, extend the daily maximum hours of work specified in this section up to twelve hours inclusive of interval for rest in any day, subject to a maximum of forty eight hours in any week as specified in section 51, in respect of any group or class or description of factories on such conditions as it may deem expedient, subject to the written consent of such worker for such work, and the remaining days of the said week for the worker shall be paid holidays."

**3. Amendment of section 55.-** In section 55 of the Principal Act, after sub-section (2), the following shall be inserted, namely:-

"(3) The state government may by notification extend the total number of hours of work of a worker without an interval to six hours in respect of any group or class or description of factories on such conditions as it may deem expedient due to the provision of flexibility in working hours as specified in sub-section (2) of section 54."

**4. Amendment of section 56:-** In section 56 of the Principal Act,-

(i) the existing provision shall be numbered as sub-section (1); and

(ii) after sub-section (1) so numbered, the following shall be inserted, namely:-

"(2) The State Government may by notification in the Official Gazette increase the spread over up to 12 hours inclusive of his intervals for rest in respect of any group or class or description of factories on such conditions as it may deem expedient, due to the provision of flexibility in working hours as specified in sub-section (2) of section 54."

**5. Amendment of section 59.-** In section 59 of the Principal Act, for sub-section (1), the following shall be substituted, namely:-

"(1) Where a worker works in any factory,-

(i) for more than nine hours in any day or for more than forty eight hours in any week, working for six days in any week;

(ii) for more than ten hours in any day or for more than forty eight hours in any week, working for five days in any week;

(iii) for more than eleven and a half hours in any day working for four days in any week, or works on paid holidays

-he shall in respect of overtime work, be entitled to wages at the rate of twice his ordinary rate of wages."

**6. Amendment of section 65.-** In section 65 of the Principal Act, in sub-section (3),-

(i) in clause (iv), for the words "seventy five" the words "one hundred and forty four hours" shall be substituted;

(ii) after clause (iv) the following shall be inserted, namely:-

"(v) a worker shall be required to work overtime subject to the written consent of such worker for such work."

**7. Substitution of section 66.-** For section 66 of the Principal Act, the following shall be substituted, namely:-

**"66. Further restriction on employment of women.-** The provisions of this Chapter shall, in their application to women in factories, be supplemented by the following further restrictions, namely:-

(a) no woman shall be required or allowed to work in any factory except between the hours of 6 A.M. to 7 P.M:

Provided that a woman may be required or allowed to work in any factory between the hours of 7 P.M to 6 A.M subject to the following conditions, namely:-

(i) It shall be the duty of the employer or other responsible persons at the work places to prevent or deter the commission of acts of sexual harassment and to provide the procedures for the resolution, statement or prosecutions of acts of sexual harassment by taking all steps required;

(ii) Express prohibition of sexual harassment in any form such as unwelcome sexually determined behaviour either directly or by implication or advances or contact to gain contact or demand sexual favours or make sexually coloured remarks or showing pornography or any other unwelcome physic, verbal or non-verbal contact of sexual nature;

(iii) Provide appropriate working conditions in respect of works, leisure, health and hygiene to further ensure that there is no hostile environment towards women at workplaces and no woman employee should have reasonable grounds to believe that she is disadvantaged in connection with her employment;

(iv) The employer shall maintain a complaint redressal mechanism in the factory itself and the said mechanism shall ensure time-bound treatment of complaint. Such mechanism shall provide, when necessary a Complaint Committee, a special counsellor or other support services including the maintenance of confidentiality;

(v) The female employees shall be allowed to raise issues of sexual harassment to workers in the workers meeting and other appropriate forums;

(vi) The employer shall provide proper lighting and CCTV coverage not only inside the factory, but also surrounding of the factory and to all places where the female workers may move out of necessity in the course of work. CCTV forage shall be storage for not less than forty five days;

(vii) The employer shall see that the women workers are employed in a batch not less than ten;

(viii) Sufficient women security shall be provided during the night shift at the entry as well as exit point;

(ix) Sufficient number of rest rooms shall be provided for the female workers to arrive in advance and also leave after the working hours;

(x) The employer shall provide transportation facility to the women workers from their residence and back (for night shift) and security guards (including female security guard) and each transportation vehicle shall also be equipped with CCTV camera and GPS;

(xi) During night shift not less than $1/3^{rd}$ of strength of the supervisor shift-in-charge or foreman or other supervisory staff shall be women;

(xii) There shall be not less than twelve consecutive hours of rest or gap between the last shifts and the night shift wherever a women worker is changed from day shift to night shift and so also from night shift to day shift;

(xiii) The establishment shall obtain Bio-data of each driver and conduct pre-employment screening of the antecedents of all drivers employed on their own. As regards the driver employed through outsourcing, the company shall ensure to its satisfaction that the collection of Bio-data and conduct pre-employment screening of the antecedents of the drivers is carried out by the service provider;

(xiv) The telephone number, particularly mobile phone numbers email ID and address of the women employees shall not be disclosed to unauthorised persons;

(xv) Careful selection of routes shall be made in such a way that no women employees shall be picked up first and dropped last; and

(xvi) It shall not be made compulsory or obligatory for any women worker to work in night shifts. Written consent shall be obtained from the women workers who are interested to work in night shifts.

(b) There shall be no change of shifts except after a weekly holiday or any other holiday."

## STATEMENT OF OBJECTS AND REASONS

It is considered necessary to amend the Factories Act 1948 (Central Act 63 of 1948) in its application to the State of Karnataka to,-

(i) allow the State Government to increase the number of hours of work from the existing nine hours up to twelve hours inclusive of rest intervals in any day subject to maximum of 48 hours in any week, to create more economic activities and employment opportunities.

(ii)allow the State Government to extend the total number of hours of work by a worker without an interval to six hours to any group or class or description of factories to facilitate the increase in the daily maximum hours of work due to provisions of flexibility in working hours.

(iii) allow the State Government to prescribe the hours of work in any day or in any week above which wages at the rate of twice the rate of ordinary in respect of overtime work is payable to worker in respect of overtime work.

(iv) allow the factories to engage workers on overtime for an increased period of time in a quarter to deal with exceptional press of work.

(v) enable the employment of woman workers on overtime work, providing for equality and equal opportunity to work and earn, and also to enable employment of woman round the clock subject to the conditions to secure safety and health of the woman workers working in night shifts, upon obtaining written consent from the woman workers who are interested to work in night shifts.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**Arabail Hebbar Shivaram**
Minister for Labour

**M.K. VISHALAKSHI**
Secretary
Karnataka Legislative Assembly

**ANNEXURE**
**Extract from the Factories Act, 1948**
**(Central Act 63 of 1948)**

**XXX XXX XXX**

**54. Daily hours.—** Subject to the provisions of section 51, not adult worker shall be required or allowed to work in a factory for more than nine hours in any day:

Provided that, subject to the previous approval of the Chief Inspector, the daily maximum specified in this section may be exceeded in order to facilitate the change of shifts.

**XXX XXX XXX**

**55. Intervals for rest.—** (1) The periods of work of adult workers in a factory each day shall be so fixed that no period shall exceed five hours and that no worker shall work for more than five hours before he has had an interval for rest of at least half an hour.

(2) The State Government or, subject to the control of the State Government, the Chief Inspector, may, by written order and for the reasons specified therein, exempt any factory from the provisions of sub-section (1) so, however, that the total number of hours worked by a worker without an interval does not exceed six.

**XXX XXX XXX**

**56. Spread over.—** The periods of work of an adult worker in a factory shall be so arranged that inclusive of his intervals for rest under section 55, they shall not spread over more than ten and a half hours in any day:

Provided that the Chief Inspector may, for reasons to be specified in writing increase the spread over up to twelve hours.

**XXX XXX XXX**

**59. Extra wages for overtime.—** (1) Where a worker works in a factory for more than nine hours in any day or for more than forty-eight hours in any week, he shall, in respect of overtime work, be entitled to wages at the rate of twice his ordinary rate of wages.

(2) For the purposes of sub-section (1), “ordinary rate of wages” means the basic wages plus such allowances, including the cash equivalent of the advantage accruing through the concessional sale to workers of foodgrains and other articles, as the worker is for the time being entitled to, but does not include a bonus and wages for overtime work.

(3) Where any workers in a factory are paid on a piece rate basis, the time rate shall be deemed to be equivalent to the daily average of their full-time earnings for the days on which they actually worked on the same or identical job during the month immediately preceding the calendar month during which the overtime work was done, and such time rates shall be deemed to be ordinary rates of wages of those workers:

Provided that in the case of a worker who has not worked in the immediately preceding calendar month on the same or identical job, the time rate shall be deemed to be equivalent to the daily average of the earning of the worker for the

days on which he actually worked in the week in which the overtime work was done.

**Explanation.—** For the purposes of this sub-section in computing the earnings for the days on which the worker actually worked such allowances, including the cash equivalent of the advantage accruing through the concessional sale to workers of foodgrains and other articles, as the worker is for the time being entitled to, shall be included but any bonus or wages for overtime work payable in relation to the period with reference to which the earnings are being computed shall be excluded.

**XXX XXX XXX**

**65. Power to make exempting orders.—** (1) Where the State Government is satisfied that, owing to the nature of the work carried on or to other circumstances, it is unreasonable to require that the periods of work of any adult workers in any factory or class or description of factories should be fixed beforehand, it may, by written order, relax or modify the provisions of section 61 in respect of such workers therein, to such extent and in such manner as it may think fit, and subject to such conditions as it may deem expedient to ensure control over periods of work.

(2) The State Government or, subject to the control of the Stale Government, the Chief Inspector may by written order exempt, on such conditions as it or he may deem expedient, any or all of the adult workers in any factory or group or class or description of factories from any or all of the provisions of sections 51, 52, 54 and 56 on the ground that the exemption is required to enable the factory or factories to deal with an exceptional press of work.

(3) Any exemption granted under sub-section (2) shall be subject to the following conditions, namely:—

(i) the total number of hours of work in any day shall not exceed twelve;

(ii) the spread over, inclusive of intervals for rest, shall not exceed thirteen hours in any one day;

(iii) the total number of hours of work in any week, including overtime, shall not exceed sixty;

(iv) no worker shall be allowed to work overtime, for more than seven days at a stretch and the total number of hours of overtime work in any quarter shall not exceed seventy-five.

**Explanation.—**In this sub-section “quarter” has the same meaning as in sub-section (4) of section 64.

**XXX XXX XXX**

**66. Further restrictions on employment of women.—** (1) The provisions of this Chapter shall, in their application to women in factories, be supplemented by the following further restrictions, namely:—

(a) no exemption from the provisions of section 54 may be granted in respect of any woman;

(b) no woman shall be required or allowed to work in any factory except between the hours of 6 A.M. and 7 P.M.:

Provided that, the State Government may, by notification in the Official Gazette, in respect of any factory or group or class or description of factories, very the limits laid down in clause (b), but so that no such variation shall authorise the employment of any woman between the hours of 10 P.M. and 5 A.M.:

(c) there shall be no change of shifts except after a weekly holiday or any other holiday.

(2) The State Government may make rules providing for the exemption from the restrictions set out in sub-section (1), to such extent and subject to such conditions as it may prescribe, of women working in fish-curing or fish-canning factories, where the employment of women beyond the hours specified in the said restrictions is necessary to prevent damage to, or deterioration in, any raw material.

(3) The rules made under sub-section (2) shall remain in force for not more than three years at a time.

**XXX XXX XXX**

Govt. Press, Vikasa Soudha, Bengaluru, 21st Feb, 2023, P7, W.D. , Copies 500